BCU NEWS

ಜ್ಞಾನ ಜ್ಯೋತಿ
BCU CHRONICLE
JNANA JYOTHI
ಆಗು ನೀ ಅನಿಕೇತನ
BE BOUNDLESS

BCU RADIO

Volume: IV | Edition: 1 | BENGALURU | Date: Jun 05-11, 2023

https://www.bcumcj.com | For Private Circulation Only | @BCUMCJ

# ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ: ರಾಜ್ಯಾದ್ಯಂತ ಏಕಕಾಲಕ್ಕೆ 'ಶಕ್ತಿ'ಗೆ ಚಾಲನೆ

**ವಿನೋದ್ ಚಲವಾದಿ**

**ಬೆಂಗಳೂರು:** ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಪ್ರಮುಖ ಗ್ಯಾರಂಟಿಗಳಲ್ಲಿ ಮೊದಲ ಗ್ಯಾರಂಟಿ ಜೂನ್ 11 ರಂದು ಸಮಸ್ತ ಕನ್ನಡಿಗರಿಗೆ ಸಮರ್ಪಣೆ ಆಗಲಿದೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ, ಹಣದುಬ್ಬರದ ಕಾರಣಕ್ಕೆ ಸಂಕಷ್ಟಕ್ಕೆ ತುತ್ತಾಗಿರುವ ಕನ್ನಡ ನಾಡಿನ ಮಹಿಳಾ ಸಮೂಹಕ್ಕೆ ಕೊಂಚ ನಿರಾಳ ನೀಡುವ ಶಕ್ತಿ ಯೋಜನೆಯ ಚಾಲನೆ ಅತ್ಯಂತ ಅರ್ಥಪೂರ್ಣವಾಗಿ ನಡೆಸಬೇಕು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಕನ್ನಡ ನಾಡಿನ ಅರ್ಧದಷ್ಟಿರುವ ಮಹಿಳಾ ಸಮೂಹದ ಪಾಲಿನ 'ಶಕ್ತಿ' ಯೋಜನೆಗೆ ರಾಜ್ಯಾದ್ಯಂತ ಏಕ ಕಾಲಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿರ್ಧರಿಸಿದ್ದು ಈ ಕುರಿತು ಸಚಿವರು ಮತ್ತು ಶಾಸಕರಿಗೆ ಸೂಚನೆ ನೀಡಿದ್ದಾರೆ. ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಪ್ರಮುಖ




ಶಕ್ತಿ ಯೋಜನೆಗೆ ಚಾಲನೆ ನೀಡುತ್ತಿರುವ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು

ಗ್ಯಾರಂಟಿಗಳಲ್ಲಿ ಮೊದಲ ಗ್ಯಾರಂಟಿ ಜೂನ್ 11 ರಂದು ಸಮಸ್ತ ಕನ್ನಡಿಗರಿಗೆ ಸಮರ್ಪಣೆ ಆಗಲಿದೆ. ಕೇಂದ್ರ ಸರ್ಕಾರದ ಬೆಲೆ ಏರಿಕೆ, ಹಣದುಬ್ಬರದ ಕಾರಣಕ್ಕೆ ಸಂಕಷ್ಟಕ್ಕೆ ತುತ್ತಾಗಿರುವ ಕನ್ನಡ ನಾಡಿನ ಮಹಿಳಾ ಸಮೂಹಕ್ಕೆ ಕೊಂಚ ನಿರಾಳ ನೀಡುವ ಶಕ್ತಿ ಯೋಜನೆಯ ಚಾಲನೆ ಅತ್ಯಂತ ಅರ್ಥಪೂರ್ಣವಾಗಿ ನಡೆಸಬೇಕು. ಸರ್ಕಾರ ತನ್ನ ಮೇಲೆ ಬೀಳುವ ಆರ್ಥಿಕ ಹೊರೆಯ ಹೊರತಾಗಿಯೂ ಜನ ಕಲ್ಯಾಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ಸರ್ಕಾರ ಅಸ್ತಿತ್ವಕ್ಕೆ ಬಂದ ತಿಂಗಳ ಒಳಗೇ ಜಾರಿಗೆ ತರುತ್ತಿದೆ. ಯಾವುದೇ ಜಾತಿ, ಧರ್ಮದ ಮಿತಿಗೆ ಒಳಪಡದ ಶಕ್ತಿ ಯೋಜನೆಯ ಅನುಕೂಲ ಅರ್ಹ-ರಿಗೆಲ್ಲಾ ತಲುಪುವಂತೆ ನೋಡಿಕೊಳ್ಳಬೇಕು ಎಂದು ಸಚಿವರು ಮತ್ತು ಶಾಸಕರುಗಳಿಗೆ ಸೂಚಿಸಿದ್ದಾರೆ.

ಸಚಿವರನ್ನು ನೇಮಿಸಲಾಗುವುದು. ನೇಮಕವಾದ ತಕ್ಷಣ ಎಲ್ಲಾ ಸಚಿವರೂ ಕಾರ್ಯೋನ್ಮುಖರಾಗಿ ಯೋಜನೆಯ ಅರ್ಥಪೂರ್ಣ ಚಾಲನೆ ನೀಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸಚಿವರಿಗೆ ಸೂಚನೆಯನ್ನೂ ನೀಡಿದ್ದಾರೆ.

"ಶಕ್ತಿ ಯೋಜನೆ"ಗೆ ಬೆಂಗಳೂರಿನಲ್ಲಿ ನಾನು (ಮುಖ್ಯಮಂತ್ರಿಗಳು) ಚಾಲನೆ ನೀಡುತ್ತಾರೆ. ಇದೇ ಸಂದರ್ಭದಲ್ಲಿ ಶಾಸಕರು ಮತ್ತು ಜಿಲ್ಲಾ ಸಚಿವರುಗಳು ತಮ್ಮ ತಮ್ಮ ಜಿಲ್ಲೆ ಮತ್ತು ಕ್ಷೇತ್ರಗಳಲ್ಲಿ ಯೋಜನೆಗೆ ಚಾಲನೆ ನೀಡಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

# Karnataka CM Siddaramaiah Unveils ₹3.27 Lakh Crore Budget,

## With Five Guarantee Schemes Valued at ₹52,000 Crore.

V PavanKumar

**Karnataka:** Chief Minister Siddaramaiah of Karnataka recently presented his 14th state budget, showcasing a robust financial plan for the fiscal year 2023-24. The budget, with a total outlay of ₹3,27,747 crore, marked a significant increase from the previous budget of ₹3,09,182 crore presented by former Chief Minister Basavaraj Bommai earlier in February 2023. One noteworthy aspect of the new budget is its approach to revenue generation. While Basavaraj Bommai's pre-election budget did not introduce any new taxes, Siddaramaiah's budget introduced several key changes. These include a 20% hike in Additional Excise Duty on Indian Made Liquor and a 5.71% increase on beer. Additionally, the proposal aims to revise the guidance value of properties throughout Karnataka and sets higher revenue targets from stamp duty and registration fees. It also outlines plans to revise taxes on certain vehicle categories, all geared toward mobilizing resources. The primary motivation behind these revenue-enhancing measures is to accommodate the substantial ₹52,000 crore earmarked for implementing five guarantee schemes by the Congress. Defending these schemes, Chief Minister Siddaramaiah highlighted their potential impact. He stated that these programs would benefit approximately 1.30 crore families, providing an average of ₹4,000 to ₹5,000 in additional monthly financial assistance to each household. Siddaramaiah emphasized that the objective is to establish a universal basic income, marking a pioneering initiative in India. The budget presentation reflects Karnataka's commitment to balancing fiscal responsibility with social welfare, setting the stage for ambitious programs that aim to uplift the state's residents.



# Wrestlers Meet Sports Minister Anurag Thakur, Suspend Protest Till June 15

V PavanKumar

In a significant development, wrestlers Bajrang Punia, Sakshi Malik, and Satyawart Kadiyan, along with other prominent athletes, held a marathon meeting with Union Sports Minister Anurag Thakur at his residence on Thursday. The meeting, lasting over six hours, followed Minister Thakur's late-night tweet expressing the government's willingness to engage with the protesting wrestlers.



Wrestlers Sakshi Malik, Vinesh Phogat and Bajrang Punia during the protest. File

Minister Thakur emerged from the discussions to announce a critical commitment: the investigation into allegations against Wrestling Federation of India chief and BJP MP Brij Bhushan Sharan Singh will be completed by June 15, and chargesheets will be filed promptly. "The election of WFI will be done by 30th June," Thakur declared, shedding light on the government's agenda to restore order within the wrestling body.The wrestlers, who have been actively protesting against Brij Bhushan Sharan Singh for alleged sexual harassment of women wrestlers, tabled five demands during the meeting. These include a demand for free and fair WFI elections and the appointment of a female chief, with the stipulation that Singh or his family members should have no part in the WFI.Union Home Minister Amit Shah, who had met the wrestlers the previous week, extended an invitation for a second round of talks. This underscores the government's commitment to resolving the long-standing issue. Notably, the wrestlers suspended their protests until June 15, as a sign of goodwill, but Bajrang Punia emphasized that they would not hesitate to resume their demonstrations if meaningful actions were not taken by the specified date. The allegations against Brij Bhushan Sharan Singh include serious charges of sexual harassment, including one involving a minor. While reports suggest the minor has withdrawn her complaint, FIRs based on complaints by six adult women wrestlers remain in effect. The wrestling athletes had staged a sit-in protest at Jantar Mantar from April 23 to May 28, garnering substantial support from various quarters, including farmers' unions. However, on May 28, as Prime Minister Narendra Modi inaugurated the new parliament building with Singh in attendance, the Delhi Police detained the protesters, dismantled their protest site, and filed FIRs against them. Subsequently, the police denied them permission to return to Jantar Mantar or protest at India Gate. Earlier in their struggle, the wrestlers accused Minister Thakur of downplaying the issue on behalf of Singh. Vinesh Phogat, one of the protesting athletes, had expressed disappointment, stating that despite sharing instances of sexual harassment with the sports minister, no concrete actions had been taken.Despite recent attempts by some media outlets to suggest that the protests had ended due to wrestlers returning to their railway jobs and meeting with Home Minister Shah, the athletes vehemently denied this claim. They reiterated that their protest was ongoing and vowed to continue fighting for justice.Bajrang Punia addressed this, stating, "The protest hasn't stopped at all, it is very much ongoing. We're planning our next steps." In response to allegations of pressure to return to work, Punia clarified that they had not faced such threats. He reaffirmed their commitment to their fight for respect and justice.While no immediate resolution was reached during the meeting with Home Minister Amit Shah, the wrestlers remain cautious. Punia stated, "We have received assurances before, in January, and we gave up our protest then. But then nothing happened, and so now we will not stop protesting until we see more than just assurances."The wrestling community's determination remains unwavering as they await concrete actions to address their concerns and bring about positive change within the Wrestling Federation of India.

## ವಿದ್ಯುತ್ ದುರುಪಯೋಗ ಮಾಡುವಂತೆ ಕುಮ್ಮಕ್ಕು ನೀಡುತ್ತಿರುವ ಬಿಜೆಪಿ ವಿರುದ್ಧ ಸಿಎಂ ಸಿದ್ದರಾಮಯ್ಯ ಕಿಡಿ

**ವಿನೋದ್ ಚಲವಾದಿ,**

***World Enviornment Day***: ನೀರು, ಗಾಳಿ, ವಿದ್ಯುತ್ ಯಾವುದನ್ನೂ ದುಂದುವೆಚ್ಚ ಮಾಡಬಾರದು. ದುಂದುವೆಚ್ಚ ಎನ್ನುವುದು ಪ್ರಕೃತಿ ವಿರೋಧಿ, ಜನ ವಿರೋಧಿ ಮತ್ತು ಪರಿಸರ ವಿರೋಧಿಯಾದದ್ದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟಿದ್ದಾರೆ. ವಿದ್ಯುತ್ ಅನ್ನು ದುಂದುವೆಚ್ಚ ಮತ್ತು ದುರುಪಯೋಗ ಮಾಡುವಂತೆ ಜನರಿಗೆ ಬಿಜೆಪಿ ಕುಮ್ಮಕ್ಕು ಕೊಡುತ್ತಿದೆ. ಆದರೆ ನಾವು ಅಗತ್ಯಕ್ಕೆ ತಕ್ಕಂತೆ ಬಳಸಲು ನಾಡಿನ ಜನತೆಗೆ ನೆರವಾಗುತ್ತೇವೆ. ಈ ಮೂಲಕ ದುಂದುವೆಚ್ಚ-ದುರುಪಯೋಗಕ್ಕೆ ಕಡಿವಾಣ ಹಾಕುತ್ತೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು. ಜ್ಞಾನಜ್ಯೋತಿ ಸಭಾಂಗಣದಲ್ಲಿ ಅರಣ್ಯ ಇಲಾಖೆ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ 2023 ಉದ್ಘಾಟಿಸಿದ ಬಳಿಕ ಕರ್ನಾಟಕ ರಾಜ್ಯ ಪರಿಸರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ನೀರು, ಗಾಳಿ, ವಿದ್ಯುತ್ ಯಾವುದನ್ನೂ ದುಂದುವೆಚ ಮಾಡಬಾರದು. ದುಂದುವೆಚ್ಚ ಎನ್ನುವುದು ಪ್ರಕೃತಿ ವಿರೋಧಿ, ಜನ ವಿರೋಧಿ ಮತ್ತು ಪರಿಸರ ವಿರೋಧಿಯಾದದ್ದು ಎಂದರು. ಮನುಷ್ಯ ಪ್ರಕೃತಿಕ ಅವಿಭಾಜ್ಯ ಅಂಗ. ಪ್ರಕೃತಿ ನಾಶ ನಮ್ಮ ನಾಶ. ಹೀಗಾಗಿ ಪ್ರಕೃತಿಯ ಜತೆಗೆ ನಾವು ಬೆಳೆಯಬೇಕು ಮತ್ತು ಬದುಕಬೇಕು ಎಂದು ಅವರು ಕರೆ ನೀಡಿದರು.

ಸಂಕಷ್ಟದಲ್ಲಿರುವ ನಾಡಿನ ಬಡವರು ಮತ್ತು ಮಧ್ಯಮ ವರ್ಗದವರ ನೆರವಿಗಾಗಿ ನಾವು ಉಚಿತ ವಿದ್ಯುತ್ ನೀಡಲು ಮುಂದಾಗಿದ್ದೇವೆ. ಒಂದು ವರ್ಷದ ಸರಾಸರಿ ಬಳಕೆಗಿಂತ ಶೇ.10 ರಷ್ಟು ಹೆಚ್ಚು ಉಚಿತ ವಿದ್ಯುತ್ ಬಳಕೆಗೆ ನಾವು ಅವಕಾಶ ನೀಡಿದ್ದೇವೆ. ಇದನ್ನು ನಾಡಿನ ಜನತೆ ಸಂಭ್ರಮದಿಂದ ಒಪ್ಪಿಕೊಂಡಿದ್ದಾರೆ ಎಂದು ಹೇಳಿದರು. ಆದರೆ ಜನರಿಂದ ತಿರಸ್ಕೃತಗೊಂಡಿರುವ ಬಿಜೆಪಿ, ವಿದ್ಯುತ್ ಅನ್ನು ಅನಗತ್ಯ ದುರ್ಬಳಕೆ, ದುಂದುವೆಚ್ಚ ಮತ್ತು ದುರುಪಯೋಗ ಮಾಡಲು ಕುಮ್ಮಕ್ಕು ಕೊಡುತ್ತಿದೆ. ಇದು ಜನವಿರೋಧಿಯಾದ ನಡಿಗೆ. ನಾಡಿನ ಪ್ರಜ್ಞಾವಂತ ಜನತೆ ಇದಕ್ಕೆ ಸೊಪ್ಪು ಹಾಕುವುದಿಲ್ಲ ಎನ್ನುವ ಭರವಸೆ ನಮಗಿದೆ ಎಂದರು ಪರಿಸರ ಉಳಿಸುವುದು, ಕಾಡು ಬೆಳೆಸುವುದು ಮತ್ತು ಉಳಿಸುವುದು ಕೇವಲ ಅರಣ್ಯ ಇಲಾಖೆ ಕರ್ತವ್ಯ ಅಲ್ಲ. ಪ್ರತಿಯೊಬ್ಬರ ಜವಾಬ್ದಾರಿ. ಪ್ರಕೃತಿಯ ಪ್ರಯೋಜನವನ್ನು ಪಡೆಯುತ್ತಿರುವ ಪ್ರತಿಯೊಬ್ಬರ ಮೇಲೂ ಪ್ರಕೃತಿ ಉಳಿಸುವ ಜವಾಬ್ದಾರಿ ಇದೆ ಎಂದರು.

# Editorial


## "Urgent Call for Peace: Addressing the Unrest in Manipurr"

In recent weeks, Manipur has witnessed a distressing surge in violence, plunging the state into a state of uncertainty and fear. The clashes between different groups have escalated to a point where the very fabric of social harmony is under threat. As we confront this tumultuous situation, it is imperative for all stakeholders, including the government, community leaders, and citizens, to come together and find a peaceful resolution.The root causes of the violence must be carefully examined to chart a sustainable path forward. Historical grievances, economic disparities, and political tensions have simmered beneath the surface for far too long. It is time for a comprehensive and inclusive dialogue that addresses these issues and seeks solutions that benefit all communities.The role of the government in restoring peace cannot be overstated. Immediate steps must be taken to ensure the safety of the citizens and to prevent further escalation of hostilities. Law enforcement agencies should be deployed judiciously, adhering to principles of fairness and justice. Additionally, efforts should be made to engage with community leaders to foster understanding and cooperation.Community leaders also bear a significant responsibility in calming tensions and promoting reconciliation. By promoting open dialogue and discouraging violence, they can play a crucial role in rebuilding trust among the diverse communities in Manipur. It is essential for leaders to emphasize the shared history and common aspirations that bind the people of Manipur together.The media plays a pivotal role in shaping public perception and can contribute to either exacerbating or alleviating tensions. Responsible reporting is crucial during times of crisis, and media outlets must prioritize accurate and unbiased coverage to avoid further inflaming the situation.In conclusion, Manipur stands at a critical juncture, and collective efforts are needed to steer the state toward peace and stability. This requires a commitment from all stakeholders to engage in open dialogue, address grievances, and work towards a future where Manipur can thrive as a diverse and harmonious society. The time for action is now, and it is our collective responsibility to ensure that Manipur emerges from this challenging period stronger and more united.

# "Rahul Gandhi's Bharath Jodo Yatra: Weaing a Tapestry of Unity Across India"

V Pavan Kumar

In a historic and unprecedented move, Rahul Gandhi, scion of the prominent political dynasty, embarked on a monumental journey that transcends political boundaries and seeks to weave the diverse fabric of India into a harmonious tapestry. The Bharath Jodo Yatra, a caravan of unity, has captured the imagination of the nation as it winds its way through the heartlands, fostering dialogue and understanding among the myriad communities that call India home. This ambitious endeavor, conceptualized by Rahul Gandhi, aims to bridge the gaps that often divide the nation along lines of caste, creed, and culture. The yatra, which translates to "Connecting India," is not just a political tour but a sincere attempt to engage with the people at the grassroots level, breaking the shackles of conventional political discourse.



The journey kicked off with a ceremonial flag-off, resonating with the spirit of Mahatma Gandhi's Dandi March, symbolizing a non-violent march towards unity. The yatra has since traversed both urban metropolises and rural hinterlands, bringing together people from all walks of life.

One of the notable aspects of the Bharath Jodo Yatra is its emphasis on dialogue and inclusivity. Rahul Gandhi has been actively engaging with local leaders, influencers, and ordinary citizens, listening to their concerns and aspirations. This approach reflects a departure from the traditional top-down political narrative, allowing the voices of the people to echo in the corridors of power. The yatra has also become a platform for addressing pressing issues that often take a back seat in the political discourse. From economic challenges faced by small-scale farmers to the aspirations of the youth, Rahul Gandhi has been addressing a spectrum of issues that are crucial to the well-being of the nation.

The symbolism embedded in the yatra is hard to miss. It serves as a reminder of the geographical and cultural diversity that defines India.

By choosing to traverse the length and breadth of the country, Rahul Gandhi is sending a powerful message of unity in diversity—a concept that has been a cornerstone of India's identity since its independence. As the Bharath Jodo Yatra cotinues its journey, it is leaving an indelible mark on the political landscape of the country.

The yatra is not just a political campaign; it is a movement that has the potential to redefine the way politics is conducted in India.

In a time where divisive politics often takes center stage, Rahul Gandhi's Bharath Jodo Yatra stands as a beacon of hope—a testament to the belief that the nation can rise above its differences and come together for a brighter and more inclusive future.

# ಪೆನ್‌ಡ್ರೈವ್ ಹೊರತೆಗೆದ ಹೆಚ್.ಡಿ. ಕುಮಾರಸ್ವಾಮಿ, ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತೇನೆ ಎಂದು ಹೇಳಿದ್ದಾರೆ

ವಿನೋದ್ ಚಲವಾದಿ

ಪೆನ್‌ಡ್ರೈವ್ ಹೊರತೆಗೆದ ಹೆಚ್‌ಡಿ ಕುಮಾರಸ್ವಾಮಿ, ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಬಯಲಿಗೆಳೆಯುತ್ತೇನೆ ಎಂದು ಹೇಳಿದ್ದಾರೇ ರಾಜ್ಯದ ಇಂಧನ ಇಲಾಖೆಯಲ್ಲಿ ಪ್ರತಿ ವರ್ಗಾವಣೆಗೆ □ 10 ಕೋಟಿ ವಸೂಲಿ ಮಾಡಲಾಗುತ್ತಿದ್ದು, ಒಬ್ಬ ಅಧಿಕಾರಿ ದಿನಕ್ಕೆ □ 50 ಲಕ್ಷ ಗಳಿಸುತ್ತಾರೆ ಎಂದು ಕುಮಾರಸ್ವಾಮಿ ಹೇಳಿಕೊಂಡಿದ್ದಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಚ್‌ಡಿ ಕುಮಾರಸ್ವಾಮಿ ಅವರು ಬುಧವಾರ ಕಾಂಗ್ರೆಸ್‌ನಲ್ಲಿ ಭ್ರಷ್ಟಾಚಾರದ ಆರೋಪ ಮಾಡಿದ್ದಾರೆ ಮತ್ತು ಆಡಳಿತ ಪಕ್ಷದ ಅಕ್ರಮಗಳ ಬಗ್ಗೆ ಪುರಾವೆಗಳಿವೆ ಮತ್ತು 'ಪ್ರಸ್ತುತ ಸಂಪುಟದಲ್ಲಿ ಜವಾಬ್ದಾರಿಯುತ ಸಚಿವರು' ಭಾಗಿಯಾಗಿದ್ದಾರೆ ಎಂದು ಪೆನ್‌ಡ್ರೈವ್ ಅನ್ನು ಬ್ರಾಂಡ್ ಮಾಡಿದರು. ಜನತಾ ದಳ (ಜಾತ್ಯತೀತ) ಮುಖ್ಯಸ್ಥ – ಮೇ ಚುನಾವಣೆಯ ನಂತರ ಜೆಡಿ–ಎಸ್ ಅನ್ನು ಸಂಭಾವ್ಯ 'ಕಿಂ–ಗ್‌ಮೇಕರ್' ಎಂದು ಹೇಳಿ ನಂತರ ಉತ್ತುಂಗಕ್ಕೇರಿತು ಮತ್ತು ಒಣಗಿ ಬಿಟ್ಟರು (ಕಾಂಗ್ರೆಸ್‌ನ ಪ್ರಾಬಲ್ಯ ಪ್ರದರ್ಶನದಿಂದ ಒಂದು ನಿರೀಕ್ಷೆಯಿದೆ) ಮತ್ತು ನಂತರ ಭಾರತೀಯರೊಂದಿಗೆ ಮೈತ್ರಿಯನ್ನು ಲೇವಡಿ ಮಾಡಿದ್ದಾರೆ. ಮುಂದಿನ ವರ್ಷದ ಲೋಕಸಭೆ ಚುನಾವಣೆಗೆ ಜನತಾ ಪಕ್ಷ



ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವರು

–'ಸರಿಯಾದ ಸಮಯದಲ್ಲಿ' 'ಸಾಕ್ಷಿ' ಬಿಡುಗಡೆ ಮಾಡುವುದಾಗಿ ಘೋಷಿಸಿತು. "ರಾಜ್ಯದಲ್ಲಿ ಕಾಂಗ್ರೆಸ್ ಸರಕಾರದ ಭ್ರಷ್ಟಾಚಾರದ ಪುರಾವೆ ಇರುವ ಪೆನ್ ಡ್ರೈವ್ ಅನ್ನು ಜೇಬಿನಲ್ಲಿ ಇಟ್ಟುಕೊಂಡು ತಿರುಗಾಡುತ್ತಿದ್ದೇನೆ, ಸರಿಯಾದ ಸಮಯ ಬಂದಾಗ ಬಿಡುಗಡೆ ಮಾಡುತ್ತೇನೆ, ಯಾವುದೇ ಗಟ್ಟಿ ಮಾಹಿತಿ ಇಲ್ಲದೇ ಬಿಡುಗಡೆ ಮಾಡುವುದಿಲ್ಲ, ಹಾಲಿ ಸಂಪುಟದಲ್ಲಿರುವ ಜವಾಬ್ದಾರಿಯುತ ಸಚಿವ ಇಲಾಖೆಯಲ್ಲಿನ ನೌಕರರ ವರ್ಗಾವಣೆ ಸಂದರ್ಭದಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ," ಎಂದು ಸುದ್ದಿಗಾರರಿಗೆ ತಿಳಿಸಿದರು. ರಾಜ್ಯದ ಇಂಧನ ಇಲಾಖೆಯಲ್ಲಿ ಪ್ರತಿ ವರ್ಗಾವಣೆಗೆ □ 10 ಕೋಟಿ ಶುಲ್ಕ ವಿಧಿಸಲಾಗುತ್ತಿದ್ದು, ವರ್ಗಾವಣೆಗೊಂಡ ಅಧಿಕಾರಿಯೊಬ್ಬರು ದಿನಕ್ಕೆ □ 50 ಲಕ್ಷ ಗಳಿಸುತ್ತಾರೆ ಎಂದು ಕುಮಾರಸ್ವಾಮಿ ಹೇಳಿಕೊಂಡಿದ್ದಾರೆ . "ನನ್ನ ಬಳಿ ಪುರಾವೆ ಇದೆ ಮತ್ತು ಅದು ಇಲ್ಲದೆ ನಾನು ಮಾತನಾಡುವುದಿಲ್ಲ." ಕಾಂಗ್ರೆಸ್ ಆರೋಪ ಬೆಂಗಳೂರಿನ ಉಬರ್ ದುಬಾರಿ ತಾಜ್ ವೆಸ್ಟ್ ಎಂಡ್ ನಲ್ಲಿ ಐಷಾರಾಮಿ ಸೂಟ್ ಇಟ್ಟುಕೊಂಡಿದ್ದಕ್ಕೆ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಮಂಗಳವಾರ ವಾಗ್ದಾಳಿ ನಡೆಸಿತ್ತು. "ವೆಸ್ಟ್ ಎಂಡ್ ಹೋಟೆಲ್ ನಲ್ಲಿ ದಿನದ ಬಾಡಿಗೆ ಎಷ್ಟು?... ಖಾಯಂ ಸ್ಥಾಪನೆಗೆ ಎಷ್ಟು ಕೋಟಿ ಸುರಿದಿದ್ದೀರಿ? ಜಮೀನು ಉಳುಮೆ ಮಾಡಿ ವೆಸ್ಟ್ ಎಂಡ್ ಹೋಟೆಲ್ ಗೆ ಬಾಡಿಗೆ ಕೊಡುತ್ತಿದ್ದೀರಾ? ಅಥ–'ವಾ 'ಕೆಎಸ್ ಟಿ' ಸಂಗ್ರಹದ ಹಣವನ್ನು ಬಳಸುತ್ತಿದ್ದೀರಾ?" ಪಕ್ಷ ಟ್ವೀಟ್ ಮಾಡಿದೆ. ಕುಮಾರಸ್ವಾಮಿ ಅವರು 2018 ರಲ್ಲಿ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಮುಖ್ಯಮಂತ್ರಿಯಾದ ನಂತರ ಮೊದಲ ಬಾರಿಗೆ ಸೂಟ್ ಅನ್ನು ಬಾಡಿಗೆಗೆ ಪಡೆದರು, ಇದು ಹನ್ನೆರಡು ಬಂಡಾಯ ಶಾಸಕರು ಬಿಜೆಪಿಗೆ ಸೇ–ರಿದ ನಂತರ ವಿಭಜನೆಯಾಯಿತು. ಕಾಂಗ್ರೆಸ್ ಆರೋಪಕ್ಕೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ಈಗ ಹೋಟೇಲ್‌ನಲ್ಲಿ ತಂಗಿದ್ದು ನಿಜ, ಕಾಂಗ್ರೆಸ್‌ಗೆ ಸುಂಕದ ಬಿಲ್ ಬಂದಿದೆಯೇ?, ಅವರಿಗೇಕೆ ತೊಂದರೆ? ನಾವು ಕಷ್ಟಪಟ್ಟು ದುಡಿದವರು, ನನಗೆ ಅಗತ್ಯವಿಲ್ಲ. ಯಾರಿಗಾದರೂ ಉತ್ತರಿಸಿ." 2019 ರಲ್ಲಿ ಕುಮಾರಸ್ವಾಮಿ ಅವರು ಕೊಠಡಿಯನ್ನು ಉಳಿಸಿಕೊಂಡಿದ್ದಾರೆ ಏಕೆಂದರೆ ಅದು ಅವ–ರಿಗೆ 'ಅದೃಷ್ಟ' ಎಂದು ನಂಬಿದ್ದರು. "ಹೌದು, ನಾನು ತಾಜ್ ವೆಸ್ಟ್ ಎಂಡ್‌ನಲ್ಲಿ ಕೊಠಡಿಯನ್ನು ಉಳಿಸಿಕೊಂಡಿದ್ದೇನೆ, ನಾನು ಅಲ್ಲಿ ಯಾವುದೇ ವ್ಯಾಪಾರ ಮಾಡುವುದಿಲ್ಲ ... ಆದರೆ ಕಳೆದ ವರ್ಷದ ಚುನಾವಣಾ ಫಲಿತಾಂಶಗಳು (2018 ರ ಸಮೀಕ್ಷೆ) ಹೊರಬಂದಾಗ ಕಾಂಗ್ರೆಸ್ ನನ್ನನ್ನು ಸಿಎಂ ಆಗುವಂತೆ ಕೇಳಿತು. ನಾನು ಆ ಕೋಣೆಯಲ್ಲಿದ್ದೆ, ಅದೃಷ್ಟ ಎಂದು ಭಾವಿಸಿ ಅದನ್ನು ಉಳಿಸಿಕೊಂಡೆ.

## Brand Bengaluru: ಬ್ರ್ಯಾಂಡ್ ಬೆಂಗಳೂರಿಗಾಗಿ ಜನರಿಂದ ಸಲಹೆಗಳನ್ನ ಆಹ್ವಾನಿಸಿದ ಸರ್ಕಾರ; ಡಿಸಿಎಂ ಡಿಕೆ ಶಿವಕುಮಾರ್ ಪೋರ್ಟಲ್ ಬಿಡುಗಡೆ

ವಿನೋದ್ ಚಲವಾದಿ

ಟ್ರಾಫಿಕ್ ಸೇರಿದಂತೆ ಬೆಂಗಳೂರು ಬಗ್ಗೆ ಯಾವುದೇ ಸಮಸ್ಯೆಗೆ ಪರಿಹಾರ ಕಂಡುಕೆಣಟಿಜಜ–ಜುಟಿಜಜಳ್ಳಲು ಕಾಂಗ್ರೆಸ್ ಸರ್ಕಾರ ಆರಂಭಿಸಿರುವ ಬ್ರ್ಯಾಂಡ್ ಬೆಂಗಳೂರು ಅಧಿಕೃತ ವೆಬ್‌ಸೈಟ್‌ಗೆ ಡಿಸಿಎಂ ಡಿಕೆ ಶಿವಕುಮಾರ್ ಚಾಲನೆ ನೀಡಿದ್ದಾರೆ. ಬೆಂಗಳೂರು: ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ (Bengaluru) ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕೈಗೆಣಟಿಜಜಜುಟಿಜಜಳ್ಳಲು ಇಲ್ಲಿನ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡುಕೆಣಟಿಜಜಜುಟಿಜಜಳ್ಳಲು ಸಲುವಾಗಿ ರಾಜ್ಯ ಸರ್ಕಾರದ ಬ್ರ್ಯಾಂಡ್ ಬೆಂಗಳೂರು (Brand Bengaluru) ಅಭಿಯಾನದ ಅಧಿಕೃತ ಪೋರ್ಟಲ್‌ಗೆ ಡಿಸಿಎಂ ಡಿಕೆ ಶಿವಕುಮಾರ್ ಇಂದು (ಬುಧವಾರ) ಚಾಲನೆ ನೀಡಿದ್ದಾರೆ. –ವಿಕಾಸಸೌಧ ಸುದ್ದಿಗೋಷ್ಠಿಯಲ್ಲಿ ಬ್ರ್ಯಾಂಡ್ ಬೆಂಗಳೂರು ಅಭಿಯಾನದ ಅಧಿಕೃತ ವೆಬ್‌ಸೈಟ್‌ಬಿಡುಗಡೆಗೊಳಿಸಿ ಮಾತನಾಡಿದ ಡಿಕೆ ಶಿವಕುಮಾರ್, ಇಂದು ಇಡೀ ವಿಶ್ವವು ಬೆಂಗಳೂ–ರಿನ ಪ್ರಗತಿಯ ಬಗ್ಗೆ ಗಮನಿಸುತ್ತಿದೆ. ಇದನ್ನು ಮತ್ತೊಂದು ಹಂತಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ http://brandbengaluru.karnataka.gov.in ಎನ್ನುವ ವೆಬ್ ಪೋರ್ಟಲ್‌ಅನ್ನು ಆರಂಭಿಸಲಾಗಿದೆ ಎಂದು ಹೇಳಿದರು.



ಬೆಂಗಳೂರಿನ ಅಭಿವೃದ್ಧಿಗೆ ಸರ್ಕಾರ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಸಾರ್ವಜನಿಕರು, ಬೆಂಗಳೂರಿನ ನಿವಾಸಿಗಳು, ಎನ್‌ಆರ್‌ಐಗಳು ತಮ್ಮ ಅಭಿಪ್ರಾಯಗಳನ್ನು ಈ ಪೋರ್ಟಲ್ ಮೂಲಕ ಹಂಚಿಕೊಳ್ಳಬಹುದಾಗಿದೆ. ಇಲ್ಲಿ ದಾಖಲಾಗುವ ಅಭಿಪ್ರಾಯಗಳ ಕುರಿತು ಪರಾಮರ್ಶೆ ನಡೆಸಿ ಸೂಕ್ತ ಸಲಹೆಗಳನ್ನು ಪರಿಗಣಿಸಲಾಗುವುದು ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಕಸ ವಿಲೇವಾರಿ ಸಮಸ್ಯೆ, ಟ್ರಾಫಿಕ್ ಸಮಸ್ಯೆ, ರಸ್ತೆಗುಂಡಿಗಳ ಸಮಸ್ಯೆ ಕುರಿತು ಮಾಧ್ಯಮಗಳಲ್ಲಿ ಬಿತ್ತರವಾದ ವರದಿಗಳನ್ನು ನಿವಾಸಿಗಳು, ಬೆಂಗಳೂ–ರಿನಿಂದ ವಿದೇಶಕ್ಕೆ ತೆರಳಿ ನೆಲೆಸಿರುವವರೂ ಕೂಡ ಗಂಭೀರವಾಗಿ ನೋಡುತ್ತಿದ್ದಾರೆ. ಬೆಂಗಳೂರು ವಿಶ್ವದರ್ಜೆಯ ನಗರಗಳಿಗೆ ಸ್ಪರ್ಧೆಯೊಡ್ಡುವಂತೆ ಮಾಡಬೇಕು. ಇದಕ್ಕಾಗಿ ಕಳೆದ ಹಲವು ದಿನಗಳಿಂದ ನಿರಂತರವಾಗಿ ಅಭಿಪ್ರಾಯ ಸಂಗ್ರಹಿಸುತ್ತಿದ್ದೇನೆ ಎಂದು ವಿವರಿಸಿದ್ದಾರೆ.

ಕೆಲವು ನಿವೃತ್ತ ಅಧಿಕಾರಿಗಳು, ಉದ್ಯಮಿಗಳು, ನಿವಾಸಿಗಳು, ಸ್ಥಳೀಯ ಶಾಸಕರು, ಮಾಜಿ ಕಾರ್ಪೊರೇಟ–ರ್‌ಗಳ ಅಭಿಪ್ರಾಯಗಳನ್ನು ಪಡೆದಿದ್ದೇನೆ. ನಿನ್ನೆಯಷ್ಟೇ ಘನತ್ಯಾಜ್ಯ ನಿರ್ವಹಣಾ ನಿಗಮದ ಅಧಿಕಾರಿಗಳೊಂದಿಗೆ ಚರ್ಚಿಸಿದ್ದೇನೆ. ಬೆಂಗಳೂರಿನ ವಿವಿಧ ಜಂಕ್ಷನ್‌ಗಳಿಗೆ ಭೇಟಿ ನೀಡಿ ಅಲ್ಲಿನ ಟ್ರಾಫಿಕ್ ಸಮಸ್ಯೆಯನ್ನು ಕಣ್ಣಾರೆ ನೋಡಿದ್ದೇನೆ.

ದೆಹಲಿ, ಮುಂಬೈನಲ್ಲಿ ಬೆಂಗಳೂ–ರಿಗಿಂತ ಹೆಚ್ಚು ಟ್ರಾಫಿಕ್ ಸಮಸ್ಯೆ ಇದೆ. ಆದರೆ ಎಲ್ಲರೂ ಬೆಂಗಳೂರಿನ ಬಗ್ಗೆ ಹೆಚ್ಚು ಮಾತನಾಡುತ್ತಾರೆ. ಏಕೆಂದರೆ ಬೆಂಗಳೂರು ಇಂದು ಜಾಗತಿ–ಕವಾಗಿ ಗುರುತಿಸಿಕೊಂಡಿದೆ. ಈಗ ಬಿಡುಗಡೆಗೊಳಿಸಿರುವ ಪೋರ್ಟಲ್‌ನಲ್ಲಿ ಹಳ್ಳಿಯಲ್ಲಿ ನೆಲೆಸಿರುವವರಿಂದ ಹಿಡಿದು ವಿದೇಶದಲ್ಲಿ ನೆಲೆಸಿರುವವರೂ ಸಲಹೆ ನೀಡಬಹುದಾಗಿದೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದ್ದಾರೆ.

ಕೇವಲ ಕಸ ತೆಗೆದುಕೊಂಡು ಹೋಗಿ ಸುರಿದರೆ ಆಗುವುದಿಲ್ಲ. ತ್ಯಾಜ್ಯದ ಬೆಟ್ಟ ನಿರ್ಮಿಸಿದರೆ ಸಮಸ್ಯೆ ಬಗೆಹ–ರಿಯುವುದಿಲ್ಲ. ಇದು ಒಂದು ದಿನ ಅಥವಾ ವರ್ಷದಲ್ಲಿ ಬದಲಾವಣೆ ತರಲು ಆಗುವುದಿಲ್ಲ. ಆದರೂ ಕಾಲಮಿತಿ ನಿಗದಿ ಮಾಡಿಕೊಂಡು ಕೆಲಸ ಮಾಡಬೇಕಿದೆ.

ಬೆಂಗಳೂರಿನ ಜನಸಂಖ್ಯೆ 1.30 ಕೋಟಿ ಇದೆ. 50 ಲಕ್ಷದಷ್ಟು ಮಂದಿ ಬೆಂಗಳೂರಿಗೆ ಬಂದು ಹೋಗುತ್ತಿದ್ದಾರೆ.

ರಾಜ್ಯ ಹಾಗೂ ದೇಶಕ್ಕೆ ಬೆಂಗಳೂರಿನಿಂದ ಹೆಚ್ಚಿನ ಪ್ರಮಾಣದ ಹಣ ತೆರಿಗೆ ರೂಪದಲ್ಲಿ ಹೋಗುತ್ತಿದೆ. ಬೆಂಗಳೂರಿಗೆ ಉದ್ಯೋಗ, ಶಿಕ್ಷಣಕ್ಕಾಗಿ ಬಂದವರು ಮತ್ತೆ ತಮ್ಮ ಊರಿಗೆ ಹೋಗುತ್ತಿಲ್ಲ. ಇಲ್ಲೇ ನೆಲೆಸುತ್ತಿದ್ದಾರೆ. ಹೀಗಾಗಿ ನಮ್ಮ ಪ್ರಣಾಳಿಕೆಯಲ್ಲಿ ಬೆಂಗಳೂರಿನ ಹೊರೆ ತಪ್ಪಿಸಲು 2–3ನೇ ದರ್ಜೆ ನಗರಗಳ ಅಭಿವೃದ್ಧಿ, ಎಲ್ಲಾ ಪಂಚಾಯ್ತಿ ಮಟ್ಟದಲ್ಲಿ ಉನ್ನತ ಗುಣಮಟ್ಟದ ಶಿಕ್ಷಣ ನೀಡುವ ಬಗ್ಗೆ ಕಾರ್ಯಕ್ರಮ ರೂಪಿಸಿದ್ದೇವೆ ಎಂದು ಡಿಸಿಎಂ ಹೇಳಿದ್ದಾರೆ.

ಕಳೆದ ಬಾರಿಯ ಬಜೆಟ್ ಅನ್ನು ಹೆಚ್ಚಿನ ಬದಲಾವಣೆ ಮಾಡಲು ಆಗುವುದಿಲ್ಲ. ಹೀಗಾಗಿ ಇದಕ್ಕೆ ಹೊಸ ರೂಪ ನೀಡಲು ಮುಖ್ಯಮಂತ್ರಿಗಳು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಪಾಲಿಕೆ ಮಟ್ಟದಲ್ಲಿ ಸಂಪನ್ಮೂಲ ಕ್ರೋಢೀಕರಣದ ಬಗ್ಗೆ ಪ್ರಶ್ನಿಸಿದಾಗ, ನಾನು ಈ ವಿಚಾರವಾಗಿ ಚರ್ಚೆ ಮಾಡಿದ್ದೇನೆ. ಕೆಲವರು ತೆರಿಗೆ ವಂಚನೆ ಮಾಡುತ್ತಿದ್ದಾರೆ. ಇಂತಹ ಪ್ರಕರಣಗಳಲ್ಲಿ ಏನು ಮಾಡಬಹುದು ಎಂದು ಚರ್ಚೆ ಮಾಡುತ್ತಿದ್ದೇನೆ ಎಂದು ತಿಳಿಸಿದ್ದಾರೆ.



# India's Political Landscape Buzzing with Preparations as Lok SabhaEletions Loom

**New Delhi, August 31, 2023** - As the nation inches closer to the much-anticipated Lok Sabha elections, political parties in India are ramping up their preparations to secure a stronghold in the country's legislative body. With the current political climate presenting an array of challenges and opportunities, alliances are forming and strategies are being devised to capture the attention and votes of the Indian electorate.

In a bid to consolidate their influence, several major political parties have announced alliances that have the potential to reshape the political landscape. The ruling party, in particular, is seeking to forge strong partnerships to ensure its continued dominance in the Lok Sabha. Analysts suggest that these alliances could play a decisive role in determining the outcome of the elections.

One of the most significant alliances taking shape is a coalition of regional parties from various states, united under a common agenda. This alliance aims to create a formidable front against the ruling party and has been dubbed as the "United Democratic Front." The parties involved are touting their ability to address regional concerns while also presenting a united front on national issues. This alliance's success could potentially alter the balance of power in the Lok Sabha.




Leaders of parties in the INDIA alliance in Mumbai on September 1

Meanwhile, opposition parties are also actively strategizing to challenge the status quo. The main opposition party has been working to strengthen its traditional voter base while reaching out to new demographics. Additionally, smaller parties are exploring the possibility of forming alliances with larger players to increase their chances of securing seats in the Lok Sabha.

Amidst these political maneuvers, election campaigns are beginning to gain momentum. Political rallies, public addresses, and social media campaigns are being rolled out as parties attempt to connect with voters on multiple fronts. The use of technology and data analytics is expected to be more pronounced in this election cycle, with parties leveraging these tools to understand voter sentiment and tailor their messages accordingly.

As India watches these developments unfold, citizens are gearing up to make their voices heard through the ballot box. The outcome of the Lok Sabha elections will not only determine the composition of the country's legislative body but will also reflect the aspirations and concerns of a diverse and dynamic population.

With political alliances taking shape and campaign strategies being refined, all eyes are now on the electoral battleground as India hurtles towards the upcoming Lok Sabha elections. The nation waits in anticipation to witness which parties and alliances will emerge victorious and chart the course for India's future political landscape.

# ಜಾತಿ–ಧರ್ಮ ಬಿಟ್ಟು ಸಮಾನತೆಯ ದಿಕ್ಕಿನಲ್ಲಿ ದೇಶ ನಡೆಯಲಿ


**ವಿನೋದ್ ಚಲವಾದಿ**

ನಮ್ಮ ದೇಶ ಅತ್ಯಂತ ಹೆಚ್ಚು ಸಂಪನ್ಮೂಲಗಳನ್ನು ಹೊಂದಿರುವ ದೇಶ. ಆಸ್ತಿ ಎಂದಾಕ್ಷಣ ನಮಗೆ ನೆನಪಿಗೆ ಬರುವುದು ಹಣ, ಜಮೀನು, ಚಿನ್ನ, ತಂತ್ರಜ್ಞಾನ, ಶೇರು, ಮುಂತಾದ ಅಭಿವೃದ್ಧಿ ಹೊಂದಿದ ಅನೇಕ ಧನ ಮೂಲಗಳು. ಆದರೆ ನಾನುಹೇಳಬಯಸುವುದು ಇವುಗಳ ಬಗ್ಗೆ ಅಲ್ಲ. ಇವೆಲ್ಲವೂ ಅಭಿವೃದ್ಧಿ ಹೊಂದಲು ಕಾರಣವಾದ ಈ ದೇಶದ ಸತ್ವರೆಗಳ ಬಗ್ಗೆ. ಎಲ್ಲಾ ಕ್ಷೇತ್ರದಲ್ಲಿ ಎಲ್ಲರನ್ನೂ ಬೆಳೆಸಿ ದೊಡ್ಡ ದೊಡ್ಡ ಸೌಧಗಳನ್ನು ಹಿಡಿದು ಯಾರಿಗೂ ಕಾಣದ ಪಾಯಾ ಕಲ್ಲಿನಂತೆ ಪಾತಾಳದಲ್ಲಿರುವ ಬಡಶ್ರಮಿಕ ಜನಾಂಗಗಳ ಬಗ್ಗೆ. ಹೌದು ನಾನು ಕಂಡಂತೆ ಬಡವರನ್ನು ಕಾಲು ಕಸದಂತೆ ಕೆಲವರು ಕಂಡರೆ, ಇನ್ನು ಕೆಲವರು ಬಡವರನ್ನು ಊಟದ ಸಮಯದಲ್ಲಿ ಕರಬೇವಿನಂತೆ ಬಳಸಿಕೊಳ್ಳುವ ಪ್ರವೃತ್ತಿ ಹೊಂದಿರುತ್ತಾರೆ. ಆದರೆ ಈ ಶ್ರಮಿಕ ವರ್ಗದ ಜನ–ರಿಲ್ಲದೆ ಒಂದು ದಿನ ದೇಶವು ಮುಂದೆ ಸಾಗಲಾರದು. ಇದರ ಅನುಭವವನ್ನು ನಮ್ಮ ನವನಾಗರಿಕ ಸಮಾಜದ ಅನೇಕರು ಪಡೆದಿದ್ದಾರೆ.ಇಲ್ಲಿಂದ ಸತ್ಯದ ಬೆನ್ನುಹತ್ತಿ ಹೋಗೋಣ. ಮೊದಲು ಎಲ್ಲರೂ ದೇವರ ನಾಮ ಹಾಡಿ ಶುರು ಮಾಡುವಂತೆ ದೇವರ ಕಡೆಯಿಂದ ಬರುತ್ತೇನೆ. ನಾವು ಎಷ್ಟೋ ಪ್ರಸಿದ್ಧ ದೇವಾಲಯಗಳನ್ನು ಕಂಡಿದ್ದೇವೆ, ಅವುಗಳಲ್ಲಿ ಶ್ರೀಮಂತ–ರಿಗೆ ಸುಲಭವಾಗಿ ದರ್ಶನ,ಪ್ರಸಾದ, ಸೇವೆ ಸಿಕ್ಕ ಹಾಗೆ ಬಡವರಿಗೆ ಸಿಗದು. ಮಾಡಬಾರದ ಕೃತ್ಯಗಳನ್ನು ಮಾಡಿ ಗಳಿಸಿದವನು ದೇವರ ಸೇವೆ ಪಡೆದಷ್ಟು ಸುಲಭವಾಗಿ. ನಿಷ್ಟೆ–ಭಕ್ತಿ ಹೊಂದಿರುವ ಗಳಿಸದ ಬಡವನಿಗೆ ಸಿಗದು. ಹಣವಂತನಿಗಿಲ್ಲದ ಜಾತಿ ತಾರತಮ್ಯ ಬಡವನ ವಿಚಾರದಲ್ಲಿ ದೇವರ ಮುಂದೆಯೂ ಬಂದು ಅಡ್ಡ ನಿಲ್ಲುತ್ತದೆ. ನಾವು ಎಷ್ಟೋ ಪುಣ್ಯ ಕ್ಷೇತ್ರಗಳ ವಿಚಾರಕ್ಕೆ ಬಂದಾಗ ಸಹಸ್ರಾರು ಬಡವರನ್ನು ಕ್ಯೂ ಕಾಂಪ್ಲೆಕ್ಸಗಳಲ್ಲಿ ದಿನವಿಡೀ ಕಾಯಿಸಿ , ಅವರಿಗೆ ತಿನ್ನುವದಕ್ಕೆ ಬರೀ ತಿಂಡಿ ಅಂತ ಅನ್ನಬಹುದಾದ ಪದಾಥ–ರ್ಗಗಳನ್ನು ಕೊಟ್ಟು , ಕೆಲವೊಮ್ಮೆ ಮಾರನೇ ದಿನ ಬೆಳಿಗ್ಗೆ ದರ್ಶನಕ್ಕೆ ಬಿಟ್ಟು ಪುನಃ ಪ್ರಸಾದಕ್ಕೆ ಉದ್ದ ಸಾಲುಗಳಲ್ಲಿ ನಿಲ್ಲಿಸಿರುವ ಉದಾಹರಣೆಗಳು ನಾವು ನೋಡಿದ್ದೇವೆ. ನಮ್ಮಲ್ಲಿ ಎಷ್ಟೋ ಜನ ಇದನ್ನು ಸ್ವತಃ ಅನುಭವಿಸಿದ್ದೇವೆ. ಅಲ್ಲಿ ದರ್ಶನ ಕಾಲದ ಶುಚಿ ಬಗ್ಗೆ ಮಾತನಾಡುವ ಹಾಗಿಲ್ಲ. ಬಡವನ ದವಡೆಗೆ ಮೂಲವಾಗುವ ಗಾದೆಗಳು, ಪುರಾಣ –ಪುರಾವೆಗಳು ಸಿದ್ಧವಾಗಿರುತ್ತವೆ. ಇವ–ರಿಷ್ಟು ಕಷ್ಟ ಪಟ್ಟು ಎರಡು ದಿನಗಳ ಕೂಲಿ ಪ್ರಯಾಣಕ್ಕೆ, ಇನ್ನೆರಡು ದಿನಗಳ ಕೂಲಿ ದಾರಿ ಖರ್ಚಿಗೆ ಇಟ್ಟು ಅಲ್ಲೊಂದು ದಿನ ದರ್ಶನ–ಪ್ರಸಾದಕ್ಕೆ ಮೀಸಲಿಟ್ಟು ದೇವರು ತಮ್ಮ ಜೀವನದಲ್ಲಿ ಸುಖಪ್ರಸಾದಿಸಲೆಂದು ಈ ಶ್ರಮಿಕರು ಅಲ್ಲೂ ಶ್ರಮಿಸಿದರೆ, ಮಧ್ಯಮ ವರ್ಗದವರು, ಮೇಲಿನ ವರ್ಗದವರು, ಆಮೇಲಿನ ವರ್ಗದವರು, ಶ್ರೀಮಂತರು ಅವರವರ ದರ್ಜೆಗೆ ತಕ್ಕಂತೆ ಟಿಕೆಟ್ ಪಡೆದು ದೇವರಲ್ಲಿ ತಮ್ಮ ಜೀವನದಲ್ಲಿ ಸುಖ ಶಾಂತಿ ಕೋರಲು ಅವರವರ ದರ್ಜೆಗೆ ತಕ್ಕಂತೆ ಶೀಘ್ರವಾಗಿ ದರ್ಶನ ,ಸೇವೆ, ಪ್ರಸಾದ ಪಡೆಯುತ್ತಾರೆ. ಇಷ್ಟಾದರೂ ನಮ್ಮ ಬಡಶ್ರಮಿಕರು ಮತ್ತೆ ಪುಣ್ಯಕ್ಷೇತ್ರಗಳ ಪ್ರಯಾಣ ಬಿಡಲ್ಲ, ಮನೆಹತ್ತಿರ ಇರುವ ದೇವಾಲಯದಲ್ಲಿ ಪೂಜೆ ಮಾಡಿಸಿಕೊಂಡು ನೆಮ್ಮದಿಯಿಂದ ಮನೆಯಲ್ಲಿ ಬೇಕಾದ್ದು ಮಾಡಿಕೊಂಡು ತಿಂದು ಹಾಯಾಗಿರುವ ಯೋಚನೆ ಇವ–ರಿಗೆ ಬರತ್ತೋ ಇಲ್ಲವೋ?

ಇದಾಗಬೇಕಾದರೆ ವಿದ್ಯಾರ್ಥಿಗಳು ಇನ್ನಾದರೂ ದೇವರುಗಳ ಬಗ್ಗೆ ಬರುವ ಪಾಂಪ್ಲೇಟ್ಗಳು, ಫಾರ್ವರ್ಡ್ ಮಸೇಜ್ಗಳು ಉದಾಹರಣೆಗೆ "ಈ ಸಂದೇಶವನ್ನು ಹನ್ನೊಂದು ಜನರಿಗೆ ಕಳುಹಿಸಿ ನಾಳೆ ಬೆಳಿಗ್ಗೆ ನೀವು ಶ್ರೀಮಂತರಾಗುತ್ತೀರಿ, ಇಲ್ಲದಿದ್ದಲ್ಲಿ ಹನ್ನೊಂದು ವರುಷ ಕೆಟ್ಟದು, ದರಿದ್ರ" ಇಂಥ ಸಂದೇಶಗಳನ್ನು ನಿಲ್ಲಿಸಿ. ಮಧ್ಯಮ ವರ್ಗದವರು, ಮೇಲ್ದರ್ಜೆಯವರು "ನಾವು ಆ ದೇವಸ್ಥಾನದಲ್ಲಿ ಹತ್ತು ನಿಮಿಷದಲ್ಲಿ ದರ್ಶನ ಮಾಡಿಕೊಂಡು ಬಂದ್ವಿ, ಅಂತಹ ದರ್ಶನ ಸಿಗೋದೇ ಇಲ್ಲ, ಪ್ರಸಾದ ಕೂಡ ನಮ್ಮ ಹತ್ತಿರ ತಂದು ಕೊಟ್ಟರು, ನಾವು ಏನು ಪುಣ್ಯ ಮಾಡಿದ್ದವೊ. ಆ ದೇವ–ರಿಗೆ ನಮ್ಮ ಮೇಲೆ ಎಷ್ಟು ಕರುಣೆಯು" ಇಂತಹ ಮಾತುಗಳಿಗೆ ಕಿವಿ ಕೊಡಬೇಡಿ. ಕ್ಯೂಗಳಲ್ಲಿ ನೀವು ನಿಂತು ಪುನಃ ಹಳ್ಳಕ್ಕೆ ನೀರು ಹರಿಯುವಂತೆ, ಶ್ರೀಮಂತರು ದೇವಾಲಯಗಳ ಮೇಲೆ ಬಂಡವಾಳ ಹಾಕಿ ಇನ್ನೂ ಶ್ರೀಮಂತರಾಗಲು ನೀವು ಬಂಡವಾಳವಾಗಬೇಡಿ. ಇದನ್ನು ಜಾತಿ ಮತ ಕುಲ ಭೇದ ಭಾವವಿಲ್ಲದೆ ಎಲ್ಲರೂ ಅರ್ಥ ಮಾಡಿಕೊಳ್ಳಿ .

ಇನ್ನು ಎರಡನೇ ಸತ್ಯ ಶೋಧನೆ. ನಾವು ಶ್ರಮಿಕರು ಮಾಸ್ ಹೀರೋ ಸಿನಿಮಾ ಎಂದರೆ ಮೊದಲನೇ ದಿನ ಫ್ಯಾನ್ಸಿ ಶೋಗೆ ಹೋಗ್ತೀವಿ. ಕಟೌಟಿಗೆ ಹೂವಿನಹಾರ, ಹಾಲಭಿಷೇಕ ಮಾಡಿ ನೂರು ರೂಪಾಯಿ ಟಿಕೆಟ್ ದರಕ್ಕೆ ಸಾವಿರಾರು ರೂಪಾಯಿ ಕೊಟ್ಟು ನೋಡ್ತೀವಿ. ದೊಡ್ಡ ದೊಡ್ಡ ಫ್ಲೆಕ್ಸ್ಗಳನ್ನು ಕಟ್ಟುತ್ತೇವೆ. ಸಿನಿಮಾ ನಿರೀಕ್ಷಿಸಿದಷ್ಟು ಸಮಾಧಾನವಾಗಿ ಇಲ್ಲದಿದ್ದರೂ ಆಹ–ಓಹೊ ಎಂದು ಹೇಳಿ ಹೊಗಳುತ್ತೇವೆ. ಆದರೆ ಮೇಲ್ದರ್ಜೆಯ ಪ್ರೇಕ್ಷಕರುವಾರ ಹದಿನೈದು ದಿನ ಬಿಟ್ಟು ಚಿತ್ರಮಂದಿರದಲ್ಲಿ ಸಾಲುಗಟ್ಟಿ ಜನ ನಿಂತಿದಾರ ಇಲ್ಲವೇ ಎಂದು ನೋಡಿ, ಪತ್ರಿಕಾ ಪ್ರಕಟನೆ ನೋಡಿ ಚಲನಚಿತ್ರಕ್ಕೆ ಹೋಗುತ್ತಾರೆ. ಈಗಂತೂ ಅನೇಕ ಆನ್ಲೈನ್ ವೆಬ್ ಸೈಟ್ ಗಳಲ್ಲಿ ನೋಡಿ ಸುಮ್ಮನಾಗುತ್ತಾರೆ. ಸಿನಿಮಾಗಳಲ್ಲಿ ಬಡವರ ಪರ ಸಾಲುಗಟ್ಟಲೇ ಡೈಲಾಗ್ ಹೊಡೆಯುವ ಹೀರೋಗಳು ಎಂದಾದರೂ ನಿಮ್ಮಂತೆ ಸರಳವಾಗಿ ಬದುಕುವರೇ. ನಿಮ್ಮಂತೆ ನಿಜವಾಗಿ ಶ್ರಮಿಸುವರೇ. ಸಿನಿಮಾಗಳಲ್ಲಿ ಸಮಾನತೆ ಸಾರುವವರು ನಿಮಗೆ ಸಮಾನವಾಗಿ ಇಳಿದು ಬರುವರೇ. ಟಿಕೆಟ್ ಸಾಲಿನಲ್ಲಿ ನಿಂತು ಅದೆಷ್ಟೋ ಜನ ಸಾವನ್ನಪ್ಪಿದ ವಿಷಯ ನಾವು ಓದಿ ಕೇಳಿ ತಿಳಿದುಕೊಂಡಿರುತ್ತೇವೆ. ಇದನ್ನು ನಾನು ಪರಭಾಷಾ ಚಿತ್ರದ ವಿಚಾರಗಳಲ್ಲಿ ಕೇಳಿದ್ದು ಹೆಚ್ಚು. ನಮ್ಮೂರಲ್ಲಂತೂ ಪರಭಾಷಾ ಚಿತ್ರಕ್ಕೆ ಕಿಲೋಮೀಟರ್ ಉದ್ದದ ಪಟಾಕಿಯ ಸರಮಾಲೆ ಸಿಡಿಸಿ, ಮೂವತ್ತೆರಡು ಕುರಿ ಚಿತ್ರದ ನಾಯಕನ ಕಟೌಟಿಗೆ ಬಲಿಕೊಟ್ಟು ಅಭಿಮಾನಿಗಳು ಪೋಲೀಸ್ ಕೇಸು ಎದುರಿಸಿದ್ದು ನಾನು ಕೇಳಿರುವೆ. ಇದು 2003ನೇ ಇಸವಿಯ ಮಾತು. ಹೀಗೆಲ್ಲಾ ಪರದಾಡುವ ಶ್ರಮಿಕ ವರ್ಗದವ ಓರ್ವ ಯುವಕ , ಅದೆಷ್ಟೋ ಚಲನಚಿತ್ರಗಳಲ್ಲಿ ಜಾತಿಅಂತಸ್ತುಗಳ ಸಮಾನತೆಯ ಬಗ್ಗೆ ಸಾಲುಗಟ್ಟಲೇ ಡೈಲಾಗು ಹೊಡೆಯುತ್ತಿದ್ದ ಚಲನಚಿತ್ರ ನಾಯಕರ ಮಗಳನ್ನು ವಿವಾಹವಾಗಿದ್ದಕ್ಕೆ, ಆ ನಾಯಕ ಮತ್ತವರ ಮನೆಯ ಎಲ್ಲಾ ಮಾಸ್ಹೀರೋಗಳು ಆ ಯುವಕನ ವಿರುದ್ಧ ತಿರುಗಿ ಬಿದ್ದರು. ಕೊನೆಗೆ ಆ ಮಾಸ್ ಹೀರೋ ಮಗಳೊಂದಿಗೆ ಆ ಬಡ ಯುವಕನ ವಿವಾಹ ಸಂಬಂಧವೂ ಮುರಿದು ಬಿತ್ತು. ಈಗಲಾದರೂ ಪರೀಕ್ಷಿಸಿಕೊಳ್ಳಿ ಯಾವುದೇ ಬಡವರ ಪರ ಡೈಲಾಗು ಹೊಡೆಯುವ ಚಲನಚಿತ್ರ ನಾಯಕರು–ನಾಯಕಿಯರು ತಮ್ಮ ಮನೆಗೆ ಬಡವರನ್ನು ಕೆಲಸದವರಾಗಿ ಒಪ್ಪಿಕೊಳ್ಳುವರೇ ಹೊರತು ಸೊಸೆಯಾಗಿ–ಅಳಿಯನಾಗಿ ಅಲ್ಲ. ಇಂಥವರನ್ನು ಬೆಳೆಸಲು ಶ್ರಮಿಸಿ ದುಡಿಯುವ ನಾವೇಕೆ ಸಮಯ ಹಣ ವ್ಯರ್ಥ ಮಾಡಬೇಕು.ದಯವಿಟ್ಟು ನಮ್ಮಂಥ ಬಡ ಜನಾಂಗದವರಾಡುವ ನಾಟಕಗಳನ್ನು ನೋಡಿ ಕಲೆಯನ್ನು ಪ್ರೋತ್ಸಾಹಿಸಿ.

ನಾವೆಲ್ಲರೂ ಸೇರಿ ಬೆಳೆಸಿದವರನ್ನು ನೋಡಲು ನಾವೇ ಅವರ ಮನೆಯ ಗೇಟಿನ ಮುಂದೆ ಮೈದಾನದಲ್ಲಿ ಶ್ರೀಮಂತರು ಏರ್ಪಡಿಸಿದ್ದ ರಾಜ–ಕೀಯ ಸಭೆಗಳಲ್ಲಿ ಮೂಲೆಗುಂಪಾಗುವ ಬದಲು, ನಮ್ಮ ಮನೆಯ ದೂರದರ್ಶನಗಳಲ್ಲಿ ನಮ್ಮ ಬೆರಳಿನ ಕೊನೆಯಂಚಿನಲ್ಲಿ ರಿಮೋಟ್ ನಿಂದ ಬೇಕಾದವರನ್ನು ಬೇಕಾದಂತೆ ಬದಲಾಯಿಸಿ ನೋಡೋಣ. ಟೇಕುಗಳು–ಕಟ್ಟುಗಳಿಲ್ಲದೆ ರಂಗಮಂದಿರದಲ್ಲಿ ಒಂದೇ ವೇದಿಕೆಯಲ್ಲಿ ತೊದಲದೇ ನಟಿಸಿ ಜೀವಿಸುವ ನಾಟಕ ಕಲಾವಿದರನ್ನು ಪ್ರೋತ್ಸಾಹಿಸೋಣ. ನಮ್ಮಲ್ಲಿ ನಮ್ಮವರಂತೆ ಇರುವ ರಂಗ ಕಲಾವಿದರನ್ನು ಜಾತಿ, ಮತ, ಕುಲ ಭೇದದ ತಾರತಮ್ಯವಿಲ್ಲದೆ ಪ್ರೋತ್ಸಾಹಿಸೋಣ. ಅನೇಕ ಕಲಾವಿದರ ಬದುಕಿಗೆ ನೆರವಾಗೋಣ.





# ಕ್ರೀಡೆ SPORTS



## ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್: ಬೆಳ್ಳಿ ಗೆದ್ದು ದಾಖಲೆ ನಿರ್ಮಿಸಿದ ನೀರಜ್ ಚೋಪ್ರಾ

**ವಿನೋದ್ ಚಲವಾದಿ**

ಅಮೆರಿಕದ ಒರೇಗಾನ್ ರಾಜ್ಯದ ಯುಜೀನ್‌ನಲ್ಲಿ ನಡೆಯುತ್ತಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಭಾರತದ ಜಾವೆಲಿನ್ ಪಟು ನೀರಜ್ ಚೋಪ್ರಾ ಬೆಳ್ಳಿ ಪದಕ ಜಯಿಸುವ ಮೂಲಕ ಈ ಸಾಧನೆ ಮಾಡಿದ ಎರಡನೇ ಭಾರತೀಯ ಎನಿಸಿಕೊಂಡಿದ್ದಾರೆ.



ತಮ್ಮ ನಾಲ್ಕನೇ ಪ್ರಯತ್ನದಲ್ಲಿ 88.13 ಮೀಟರ್ ದೂರ ಎಸೆಯುವ ಮೂಲಕ ನೀರಜ್ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದಾರೆ. ಗ್ರೆನಾಡ ದೇಶದ ಆಂಡರ್ಸನ್ ಪೀಟರ್ಸ್ ಸತತ ಮೂರು ಪ್ರಯತ್ನದಲ್ಲಿ 90 ಮೀಟರ್ ಅಧಿಕ ದೂರ ಜಾವೆಲಿನ್ ಎಸೆಯುವ ಮೂಲಕ ಚಿನ್ನದ ಪದಕ ತಮ್ಮದಾಗಿಸಿಕೊಂಡರು.

ಒಲಿಂಪಿಕ್ಸ್‌ನಲ್ಲಿ ಚಿನ್ನದ ಪದಕ ಜಯಿಸಿದ್ದ ನೀರಜ್ ಚೋಪ್ರಾ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಮೊದಲ ಯತ್ನದಲ್ಲಿ ಫೌಲ್ ಆದರು. ಎರಡನೇ ಪ್ರಯತ್ನದಲ್ಲಿ 82.36 ಮೀಟರ್ ಎಸೆದರು. ಮೂರನೇ ಪ್ರಯತ್ನದಲ್ಲಿ 86.37 ಮೀಟರ್‌ಗೆ ಸೀಮಿತಗೊಂಡರು. ತಮ್ಮ ನಾಲ್ಕನೇ ಪ್ರಯತ್ನದಲ್ಲಿ 88.13 ಮೀಟರ್ ದೂರ ಎಸೆಯುವ ಮೂಲಕ ಎರಡನೇ ಸ್ಥಾನ ಪಡೆದಿದ್ದಾರೆ.ಈ ಸಾಧನೆಯ ಮೂಲಕ ನೀರಜ್ ಚೋಪ್ರಾ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಪದಕ ಜಯಿಸಿದ ಎರಡನೇ ಭಾರತೀಯ ಮತ್ತು ಮೊದಲ ಪುರುಷ ಸ್ಪರ್ಧಿ ಎನಿಸಿದ್ದಾರೆ. ಈ ಮೊದಲು 2003ರಲ್ಲಿ ಲಾಂಗ್ ಜಂಪ್ ಸ್ಪರ್ಧೆಯಲ್ಲಿ ಅಂಜುಬಾಬಿ ಜಾರ್ಜ್ ಕಂಚಿನ ಪದಕ ಜಯಿಸಿದ್ದರು.

ಚಿನ್ನದ ಹುಡುಗ ಎಂದು ಕರೆಸಿಕೊಳ್ಳುವ ಬೆಳ್ಳಿ ಪದಕ ವಿಜೇತ ನೀರಜ್ ಚೋಪ್ರಾಗೆ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಇತರರು ಅಭಿನಂದನೆ ಸಲ್ಲಿಸಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಈಟಿಯನ್ನು ಬರೋಬ್ಬರಿ 87.65 ಮೀ ದೂರ ಎಸೆಯುವ ಮೂಲಕ ನೀರಜ್ ಚೋಪ್ರಾ ಭಾರತಕ್ಕೆ ಮೊದಲ ಚಿನ್ನ ತಂದು ಕೊಟ್ಟು ಇತಿಹಾಸ ನಿರ್ಮಿಸಿದ್ದಾರೆ.

ಆದಾಗ್ಯೂ, ಪಾಕಿಸ್ತಾನಿ ಜಾವೆಲಿನ್ ಏಸ್ 2023 ರ ಏಷ್ಯನ್ ಗೇಮ್ಸ್‌ನಿಂದ ಮೊಣಕಾಲಿನ ಗಾಯದಿಂದ ಹಿಂದೆ ಸರಿದಿದ್ದಾರೆ, ಇದು ಹ್ಯಾಂಗ್‌ಝೌನಲ್ಲಿ ನೀರಜ್ ಚೋಪ್ರಾ ಮತ್ತು ಅರ್ಷದ್ ನದೀಮ್ ಮುಖಾಮುಖಿಯ ಯಾವುದೇ ಅವಕಾಶಗಳನ್ನು ಕೊನೆಗೊಳಿಸಿತು.

ಪುರುಷರ ಜಾವೆಲಿನ್ ಥ್ರೋ ವಿಶ್ವ ಅಥ್ಲೆಟಿಕ್ಸ್ ಶ್ರೇಯಾಂಕದಲ್ಲಿ ವಿಶ್ವದ ನಂ. 8 ರ ಜಪಾನ್‌ನ ರೋಡೆರಿಕ್ ಜೆಂಕಿ ಡೀನ್ ಕೂಡ ಹ್ಯಾಂಗ್‌ಝೌನಲ್ಲಿ ಸ್ಪರ್ಧಿಸುತ್ತಿದ್ದಾರೆ. ನೀರಜ್ ಚೋಪ್ರಾ

## ಎಲ್ಲಾ ಮಾದರಿಯ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಮಿಥಾಲಿ ರಾಜ್

**ವಿನೋದ್ ಚಲವಾದಿ** ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಮಿಥಾಲಿ ರಾಜ್ ಇಂದು ಎಲ್ಲಾ ಮಾದರಿಯ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳಿಗೆ ವಿದಾಯ ಘೋಷಿಸಿದ್ದಾರೆ. ಈ ಬಗ್ಗೆ ತಮ್ಮ ಅಧಿಕೃತ ಟ್ವಿಟರ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ತಮ್ಮ ಟ್ವಿಟರ್ ಖಾತೆಯಲ್ಲಿ ಪತ್ರವನ್ನು ಹಂಚಿಕೊಂಡಿರುವ ಅವರು ಅಭಿಮಾನಿಗಳ "ಪ್ರೀತಿ ಮತ್ತು ಬೆಂಬಲ"ಕ್ಕಾಗಿ ಎಲ್ಲರಿಗೂ ಧನ್ಯವಾದ ಹೇಳಿದ್ದಾರೆ. "ಇಷ್ಟು ವರ್ಷಗಳಿಂದ ನಿಮ್ಮೆಲ್ಲರ ಪ್ರೀತಿ ಮತ್ತು ಬೆಂಬಲಕ್ಕೆ ಧನ್ಯವಾದಗಳು. ನಿಮ್ಮ ಆಶೀರ್ವಾದ ಮತ್ತು ಬೆಂಬಲದೊಂದಿಗೆ ನನ್ನ 2ನೇ ಇನ್ನಿಂಗ್ಸ್‌ಗಾಗಿ ಎದುರು ನೋಡುತ್ತಿದ್ದೇನೆ" ಎಂದು ಮಿಥಾಲಿ ಟ್ವೀಟ್ ಮಾಡಿದ್ದಾರೆ.ಮಹಿಳಾ ಔಆಖ–ಗಳಲ್ಲಿ (ಔಟಿಜ ಆಚಿಥಿ ಖಟಿಣಜಡಿ–ಟಿಚಿಣುಠಟಿಚಿಟ) ಅತಿ ಹೆಚ್ಚು ರನ್ ಗಳಿಸಿದ ಆಟಗಾರ್ತಿಯಾಗಿ ಮಿಥಾಲಿ ನಿವೃತ್ತಿಯಾಗಿದ್ದಾರೆ. ಅವರು 232 ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ, 50.68 ಸರಾಸರಿಯಲ್ಲಿ 7805 ರನ್ ಗಳಿಸಿದ್ದಾರೆ. ಮಿಥಾಲಿ ರಾಜ್ ಈ ಹಿಂದೆ ಟಿ20 ಅಂತರಾಷ್ಟ್ರೀಯ ಪಂದ್ಯಗಳಿಗೆ ನಿವೃತ್ತಿ ಘೋಷಿಸಿದ್ದರು.ಮಿಥಾಲಿ ಅವರು ಜೂನ್ 1999 ರಲ್ಲಿ ಐರ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮೊದಲು ಪಾದಾರ್ಪಣೆ ಮಾಡಿದ್ದರು. ಈ ವರ್ಷದ ಆರಂಭದಲ್ಲಿ ನ್ಯೂಜಿಲೆಂಡ್‌ನಲ್ಲಿ ನಡೆದ ಐಸಿಸಿ ಮಹಿಳಾ ವಿಶ್ವಕಪ್‌ನಲ್ಲಿ ಭಾರತ ತಂಡದ ನಾಯಕತ್ವ ವಹಿಸಿದ್ದರು, ಅಲ್ಲಿ ಭಾರತ ಸೆಮಿಫೈನಲ್‌ಗೆ ಅರ್ಹತೆ ಪಡೆಯಲು ವಿಫಲವಾಗಿತ್ತು.

ಇವರ ನಾಯಕತ್ವದಲ್ಲಿ ಭಾರತವು 2017 ರ ಐಸಿಸಿ ಮಹಿಳಾ ವಿಶ್ವಕಪ್‌ನ ಫೈನಲ್‌ಗೆ ತಲುಪಿತು. ಅಲ್ಲಿ ಇಂಗ್ಲೆಂಡ್ ವಿರುದ್ಧ ಸೋಲು ಅನುಭವಿಸಿದ್ದರು. 2005 ರಲ್ಲಿ ಐಸಿಸಿ ಮಹಿಳಾ ವಿಶ್ವಕಪ್‌ನ ಫೈನಲ್‌ನಲ್ಲಿ ಭಾರತ ಆಸ್ಟ್ರೇಲಿಯಾ ವಿರುದ್ಧ ಸೋತಾಗಲೂ ಮಿಥಾಲಿ ತಂಡವನ್ನು ಮುನ್ನಡೆಸಿದ್ದರು.

ಮಿಥಾಲಿ 12 ಟೆಸ್ಟ್ ಪಂದ್ಯಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ, 699 ರನ್ ಗಳಿಸಿದ್ದಾರೆ. 89 ಟಿ–20 ಪಂದ್ಯಗಳಲ್ಲಿ ಗಳಲ್ಲಿ 2364 ರನ್ ಗಳಿಸಿಸಿದ್ದಾರೆ. ತಮ್ಮ ಎರಡು ದಶಕಗಳ ಸುದೀರ್ಘ ವೃತ್ತಿಜೀವನದಲ್ಲಿ ಅವರು 8 ಅಂತರಾಷ್ಟ್ರೀಯ ಶತಕಗಳು ಮತ್ತು 85 ಅರ್ಧಶತಕಗಳನ್ನು ಗಳಿಸಿದ್ದಾರೆ.



## Siraj's Six-Wicket Spectacle Propels India to Asia Cup Triumph

In a dazzling display of cricketing prowess, India clinched the Asia Cup title with a swift and decisive victory over Sri Lanka, led by the phenomenal Mohammed Siraj. The match, delayed by 40 minutes due to overcast conditions, witnessed an extraordinary performance by Siraj, who unleashed a six-wicket storm, including a remarkable four-wicket over. With the sun-drenched afternoon turning ominous, the dark clouds held back, but the Siraj-storm struck the Sri Lankan team with unrelenting force. India, under the captaincy of Rohit Sharma, restricted the hosts to a mere 50 runs in just 89 minutes. Shubman Gill and Ishan Kishan efficiently chased down the target in a mere 6.1 overs, securing a historic win and lifting the trophy in style. Minutes before the toss, Sharma's strategic decision to include three pacers, including the sensational Siraj, proved instrumental. Despite the inclusion of Washington Sundar in the XI, the trio of pacers dominated, leaving the Sri Lankan team in disarray. Jasprit Bumrah set the tone early, and Siraj's second over saw him pick four wickets, sealing the fate of the game. Pathum Nissanka, Sadeera Samarawickrama, Charith Asalanka, and Dhanajaya de Silva all succumbed to Siraj's masterclass, as India celebrated a resounding victory and Siraj's exceptional contribution etched a glorious chapter in the Asia Cup's history.www



**v pavan kumar**

# ಮೂವಿಲ್ಯಾಂಡ್ MOVIELAND

## ಎರಡು ಆಸ್ಕರ್ ಕಥೆಗಳು!

ವಿನೋದ್ ಚಲವಾದಿ

ಫೆಬ್ರವರಿ 13ರಂದು ಭಾರತೀಯ ಮಾಧ್ಯಮಗಳು, ಭಾರತ ಮೂಲದ ಎರಡು ಸಿನಿಮಾಗಳು ಎರಡು ವಿಭಾಗಗಳಲ್ಲಿ ಪಡೆದ ಆಸ್ಕರ್ ಪ್ರಶಸ್ತಿಯ ಸಲುವಾಗಿ ಇನ್ನಿಲ್ಲದಂತೆ ಸಂಭ್ರಮಾಚರಣೆಯಲ್ಲಿದ್ದವು. ಅಮೆರಿಕ ಮೂಲದ ಈ ಪ್ರಶಸ್ತಿ ಅಷ್ಟು ಜನಪ್ರಿಯತೆ ಪಡೆದುಕೊಂಡಿರುವುದು ನಿಜವೇ! ಹಾಲಿವುಡ್‌ನ ಸಾಧಾರಣ ಸಿನಿಮಾವನ್ನು ಜತ್ತಿನಾದ್ಯಂತ 'ಶ್ರೇಷ್ಠ' ಎಂಬಂತೆ ಬಿಂಬಿಸುವ ಅಮೆರಿಕದ ಪ್ರಚಾರ ಯಂತ್ರಾಂಗ ಆಸ್ಕರ್ ಪ್ರಶಸ್ತಿಗಳನ್ನೂ ಜಾಗತಿಕವಾಗಿ ಜನಪ್ರಿಯಗೊಳಿಸಿದೆ. ಜೊತೆಗೆ, ಹಲವು ಅತ್ಯುತ್ತಮ ಸಿನಿಮಾಗಳಿಗೂ ಪ್ರಶಸ್ತಿ ನೀಡಿ ಒಂದು ಮಟ್ಟದ 'ಹೆಸರು' ಉಳಿಸಿಕೊಂಡಿರುವ 'ಆಸ್ಕರ್' ಅಮೆರಿಕದ ಶ್ರೇಷ್ಠತೆಯನ್ನು ಪ್ರಚಾರ ಮಾಡುವ ಸಿನಿಮಾಗಳಿಗೂ (ಉದಾಹರಣೆಗೆ ಯುದ್ಧೋನ್ಮಾದದ) ಪ್ರಶಸ್ತಿ ನೀಡಿ ಟೀಕೆಗೂ ಗುರಿಯಾಗಿದೆ. ಆದರೂ, ಅತ್ಯುತ್ತಮ ವಿದೇಶಿ ಚಿತ್ರ ವಿಭಾಗಕ್ಕೆ ಹಲವು ದೇಶಗಳು ಒಂದು ಸಿನಿಮಾವನ್ನು ನಾಮಾಂಕಿತ ಮಾಡುವ ಪರಿಪಾಠವನ್ನು ಉಳಿಸಿಕೊಂಡಿವೆ. ಆಲ್ಟರ್‌ನೇಟಿವ್ ಎನ್ನಬಹುದಾದ (ಕಥೆ, ನಿರೂಪಣೆ ಮುಂತಾದವುಗಳಲ್ಲಿ), ಕೇವಲ ಜನಪ್ರಿಯತೆಯನ್ನೇ ಮಾನದಂಡವನ್ನಾಗಿಟ್ಟುಕೊಳ್ಳದ, ಸಿನಿಮಾದ ವಿವಿಧ ವಿಭಾಗಗಳಲ್ಲಿ ಗಂಭೀರತೆಯನ್ನು ತೊಡಗಿಸಿಕೊಂಡ, ಸಮಕಾಲೀನ ಸಂದರ್ಭವನ್ನು ವಿಮರ್ಶಾತ್ಮಕವಾಗಿ ಚಿತ್ರಿಸುವ ಸಿನಿಮಾಗಳು ಈ ವಿಭಾಗದಲ್ಲಿ ಹೆಚ್ಚು ಪ್ರಶಸ್ತಿ ಪಡೆಯುವುದರಿಂದ, ಭಾರತದಲ್ಲಿ ಕೂಡ 'ಕಲಾತ್ಮಕ' ಚಿತ್ರಗಳು ಎಂದು ಪರಿಗಣಿಸಲಾಗುವ ಚಿತ್ರಗಳನ್ನು ಈ ವಿಭಾಗಕ್ಕೆ ಕಳುಹಿಸುವುದು ವಾಡಿಕೆ. ಅದರಂತೆಯೇ ಈ ಬಾರಿ 'ಚ್ಚೆಲ್ಲೋ ಶೋ' ಎಂಬ ಗುಜರಾತಿ ಭಾಷೆಯ ಸಿನಿಮಾವನ್ನು ಆಸ್ಕರ್‌ನ 'ವಿದೇಶಿ ಅತ್ಯುತ್ತಮ ಸಿನಿಮಾ' ವಿಭಾಗದ ಸ್ಪರ್ಧೆಗೆ ಕಳುಹಿಸಲಾಗಿತ್ತು. ಆದರೆ ಇದರ ಕೆಲವು ದಿನಗಳ ನಂತರ ಶುರುವಾಯಿತು ನೋಡಿ; ತೀವ್ರ ಪ್ರತಿಗಾಮಿ ಸಿನಿಮಾವಾದ 'ದ ಕಾಶ್ಮೀರ್ ಫೈಲ್ಸ್', ಅತಿ ಸಾಧಾರಣ ಮತ್ತು ಸನಾತನ ನಂಬಿಕೆಗಳನ್ನು ಪ್ರತಿಪಾದಿಸುವ 'ಆರ್‌ಆರ್‌ಆರ್' ಸಿನಿಮಾಗಳನ್ನು ಆಸ್ಕರ್‌ಗೆ ಕಳುಹಿಸಬೇಕಿತ್ತೆಂಬ ಗುಲ್ಲನ್ನು ಎಬ್ಬಿಸಲಾಯಿತು. ನಂತರ ಈ ಚಿತ್ರಗಳನ್ನು ಅದರ ನಿರ್ಮಾಪಕರೇ ಖಾಸಗಿಯಾಗಿ ಅರ್ಜಿ ತುಂಬಿ ಆಸ್ಕರ್ ಪ್ರಶಸ್ತಿಗಳಿಗೆ ಕಳುಹಿಸಿದರು. 'ಆರ್‌ಆರ್‌ಆರ್' ಅಂತೂ ಅಮೆರಿಕದಲ್ಲಿ ಸಿನಿಮಾ ಪ್ರಮೋಟರ್ ಸಂಸ್ಥೆಯೊಂದನ್ನು ತೊಡಗಿಸಿಕೊಂಡು ಬಹುಶಃ ಹಿಂದೆಂದೂ ಕಾಣದಷ್ಟು ಹಣ ವಿನಿಯೋಗಿಸಿ ಪ್ರಚಾರದಲ್ಲಿ ತೊಡಗಿಸಿಕೊಂಡಿತು. ಹಲವು ವಿಭಾಗಗಳಲ್ಲಿ ಈ ಸಿನಿಮಾ ನಾಮನಿರ್ದೇಶನಗೊಂಡರೂ, 'ಬೆಸ್ಟ್ ಒರಿಜಿನಲ್ ಸಾಂಗ್' ವಿಭಾಗದಲ್ಲಿ ಮಾತ್ರ 'ಆರ್‌ಆರ್‌ಆರ್' 'ನಾಟುನಾಟು' ಹಾಡು ಕೊನೆ ಹಂತದವರೆಗೂ ಉಳಿದುಕೊಂಡಿತ್ತು ಮತ್ತು ಅದರಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಇನ್ನು ಅಷ್ಟು ಅಬ್ಬರವಿಲ್ಲದೆ ಭಾರತದಲ್ಲಿ ತಯಾರಾದ ಕಿರು ಸಾಕ್ಷ್ಯಚಿತ್ರವೊಂದು ಆಸ್ಕರ್ ಪ್ರಶಸ್ತಿ ಪಡೆದು ದೇಶದ ಸಿನಿಮಾ ರಸಿಕರ ಗಮನ ಸೆಳೆಯಿತು. 'ಬೆಸ್ಟ್ ಡಾಕ್ಯುಮೆಂಟರಿ ಶಾರ್ಟ್ ಫಿಲ್ಮ್' ವಿಭಾಗದಲ್ಲಿ ಪ್ರಶಸ್ತಿ ಪಡೆದ 'ದ ಎಲಿಫೆಂಟ್ ವಿಸ್ಪರರ್ಸ್'ನ ನಿರ್ದೇಶಕಿ ಕಾರ್ತಿಕಿ ಗೋನ್ಸ್ಲೇವ್ಸ್. ತಮಿಳುನಾಡಿದ ಮಧುಮಲೈ ಹುಲಿ ಸಂರಕ್ಷಣಾ ಅಭಯಾರಣ್ಯದ ತೆಪ್ಪಕಾಡು ಎಂಬ ಬೆಟ್ಟಗಾಡು ಪ್ರದೇಶದಲ್ಲಿ ಹಿಂಡಿನಿಂದ ತಪ್ಪಿಸಿಕೊಂಡ ಆನೆ ಮರಿಗಳನ್ನು ರಕ್ಷಿಸಿ ಸಾಕುವ ಬೊಮ್ಮನ್ ಮತ್ತು ಬೆಳ್ಳಿ ಅಮ್ಮ ಅವರ ಮತ್ತು ಅವರು ಸಾಕುವ ಎರಡು ಆನೆಗಳ ಒಡನಾಟದ ಭಾವನಾತ್ಮಕ ಕಥೆ ಇದು. ತಮಿಳಿನಲ್ಲಿ ಈ ಸಾಕ್ಷ್ಯಚಿತ್ರ ನಿರೂಪಿತವಾಗಿದ್ದರೂ, ನಡುನಡುವೆ ಬೊಮ್ಮನ್ ಮತ್ತು ಬೆಳ್ಳಿ ಅಮ್ಮ ಮಾತನಾಡುವ ಆ ಭಾಗದ ಕನ್ನಡ ಮಿಶ್ರಿತ ಭಾಷೆ ವಿಶೇಷವೆನಿಸುತ್ತದೆ. ಮರಿಯಾನೆಗಳನ್ನು ತಮ್ಮ ಸ್ವಂತ ಮಕ್ಕಳಂತೆ ಸಾಕಿ ಕಾಪಾಡುವ ಈ ಭಾವನಾತ್ಮಕ ಕಥೆ 'ಫೀಲ್ ಗುಡ್' ಸಿನಿಮಾವೆನ್ನಬಹುದು. ಸಾಮಾನ್ಯವಾಗಿ ಇಂತಹ ಫೀಲ್ ಗುಡ್ ಸಿನಿಮಾಗಳನ್ನು ಹೆಚ್ಚು ಆಸ್ಕರ್ ಪ್ರಶಸ್ತಿಗಳಿಗೆ ಆಯ್ಕೆ ಮಾಡಿದ್ದಿದೆ. ರಘು ಮತ್ತು ಅಮ್ಮು ಎಂಬ ಎರಡು ಆನೆಗಳ ಜೊತೆಗಿನ ಒಡನಾಟದ ದೃಶ್ಯಗಳು ಆ ಬೆಟ್ಟಗಾಡಿನ ಪರಿಸರದಲ್ಲಿ ಮನುಷ್ಯನ ಅಭಿವೃದ್ಧಿ ಕಲ್ಪನೆಗಳಿಂದ ಪರಿಸರದಲ್ಲಿ ಆಗುತ್ತಿರುವ ಅನಾಹುತಗಳ ಬಗ್ಗೆ, ಅದರಿಂದ ಹುಟ್ಟುತ್ತಿರುವ ಕಾಡುಪ್ರಾಣಿಗಳ ಜೊತೆಗಿನ ಸಂಘರ್ಷದ ಬಗ್ಗೆ ಇನ್ನೂ ಪರಿಣಾಮಕಾರಿಯಾಗಿ ಮಾತನಾಡುವ ಅವಕಾಶವನ್ನು ಸಿನಿಮಾ ಕೈಚೆಲ್ಲಿದೆ. ಆದರೂ, ಕೋಟ್ಯಾನುಗಟ್ಟಲೆ ಪ್ರಚಾರಕ್ಕಾಗಿ ಸುರಿದ 'ಆರ್‌ಆರ್‌ಆರ್' ಸಿನಿಮಾಗಿಂತಲೂ ಹತ್ತಾರು ಪಟ್ಟು ಉತ್ತಮ ಸಿನಿಮಾ ಇದು ಎನ್ನಲಡ್ಡಿಯಿಲ್ಲ. ಮಕ್ಕಳ ಜೊತೆಗೆ ಕೂತು 'ದ ಎಲಿಫೆಂಟ್ ವಿಸ್ಪರರ್ಸ್' ನೋಡುವುದು ಒಂದು ಒಳ್ಳೆಯ ಅನುಭವವಾದೀತು. ನೆಟ್‌ಫ್ಲಿಕ್ಸ್ ಒಟಿಟಿ ವೇದಿಕೆಯಲ್ಲಿ ಇದು ವೀಕ್ಷಣೆಗೆ ಲಭ್ಯವಿದೆ.







## Jawan: Shah Rukh Khan's Stellar Comeback Ignites the Silver Screen

In a cinematic whirlwind, Shah Rukh Khan makes a triumphant return with the action-packed thriller, "Jawan." The film, directed by acclaimed filmmaker Aryan Verma, unfolds as a gripping narrative of courage, sacrifice, and patriotism.

Khan, in his element, delivers a powerhouse performance, seamlessly transitioning from his signature romantic roles to a gritty, determined military officer. Audiences are captivated by his nuanced portrayal, proving once again his versatility as an actor.

"Jawan" not only showcases Khan's acting prowess but also boasts high-octane action sequences and a compelling storyline that keeps viewers on the edge of their seats. Verma's directorial finesse is evident as he weaves together a tapestry of emotions, suspense, and adrenaline-pumping moments.

The film has struck a chord with both critics and fans, heralding it as a significant milestone in Shah Rukh Khan's illustrious career. "Jawan" is not just a movie; it's a cinematic spectacle that reaffirms Khan's star power and leaves an indelible mark on the audience's hearts. As the box office numbers soar, "Jawan" stands tall as a testament to the enduring charisma of the 'King of Bollywood.'




Chief Editor:
Prof N Narasimhamurthy,
Head of the Department,
Mass Communication
and Journalism.

Faculty Editors:
Bansy Kalappa

Student Editors:
Vinod Chalawadi
V Pavan Kumar

Printer and Publisher: The Chairman, Department of Mass Communication and Journalism, P.K.Block, Palace Road, Bengaluru-56009, Karnataka.